**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 285/2023 |
| ಸಿ.ಡಬ್ಲೂ | 5 |
| ಪಿ.ಡಬ್ಲೂ | 5 |

| | | |
|---|---|---|
| ಹೆಸರು | :- | ಗಜೇಂದ್ರ ತಳವಾರ |
| ತಂದೆ/ಗಂಡನ ಹೆಸರು | :- | ಮನೋಹರ |
| ವಯಸ್ಸು | :- | 41 ವರ್ಷ |
| ಉದ್ಯೋಗ | :- | ಅಬಕಾರಿ ನಿರೀಕ್ಷಕರು, ಶಾಂತಿನಗರ ಬೆಂಗಳೂರು |
| ವಾಸಸ್ಥಳ | :- | ಬೆಂಗಳೂರು |

<u>ಸಾಕ್ಷಿಯನ್ನು ದಿಃ29.11.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1.ಜೂಲೈ-2020 ಪೆಬ್ರುವರಿ-2024 ರವರೆಗೆ ನಾನು ಮುಧೋಳ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ದಿಃ 12.01.2023 ರಂದು ಚಾಸಾ-1 ರವರು ಸರಕಾರಿ ದ್ವಿಚಕ್ರ ವಾಹನ ಸಂಖ್ಯೆ ಕೆ.ಎ.29/ಜಿ-0645 ಮೇಲೆ ಹಾಗೂ ನಾನು ಹಾಗೂ ಚಾಸಾ-5 ರವರು ಮತ್ತೊಂದು ಪ್ರತ್ಯೇಕ ಖಾಸಗಿ ದ್ವಿಚಕ್ರ ವಾಹನದಲ್ಲಿ ಕೂಡಿಕೊಂಡು ಮುಧೋಳ ತಾಲೂಕಿನ ಚಿಕ್ಕೂರ ತಾಂಡಾದಲ್ಲಿ ಅಬಕಾರಿ ದಾಳಿಗಾಗಿ ತೆರಳಿದೆವು. ಹೆಬ್ಬಾ ಗ್ರಾಮದ ಮಾರ್ಗವಾಗಿ ಚಿಕ್ಕೂರ ತಾಂಡಾ ನಂ.1 ಕ್ಕೆ ತಲುಪಿ ಅಬಕಾರಿ ದಾಳಿ ಕೈಗೊಂಡಾಗ ಸುಮಾರು 8-45 ಗಂಟೆಗೆ ದೂರವಾಣಿ ಮುಖಾಂತರ ಒಂದು ಬಾತ್ಮಿ ಚಾಸಾ-1 ರವರಿಗೆ ಬಂದಿದ್ದು, ಸದರಿ ಬಾತ್ಮಿಯಲ್ಲಿ ಚಿಕ್ಕೂರ ತಾಂಡಾ ನಂ.2 ರ ಸಾಲಾಬಾಯಿ ಲಮಾಣಿ ಎಂಬ ಮಹಿಳೆಯು ತನ್ನ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಂಗ್ರಹಿಸಿ, ಇಟ್ಟಿದ್ದು, ತಿಳಿದು ಬಂದಿತು. ಸದರಿ ಬಾತ್ಮಿ ವಿಷಯವನ್ನು ಚಾಸಾ-4 ಮತ್ತು ನನಗೆ ತಿಳಿಸಿ ಬಾತ್ಮಿ ಬಂದ ಮನೆಯಾದ ಸಾಲಬಾಯಿ ಲಮಾಣಿ ಅವರ ಮನೆಯ ಹತ್ತಿರ ಹೋಗುತ್ತಿದ್ದಂತೆ, ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಒಬ್ಬ ಮಹಿಳೆ ಓಡಿ ಹೋಗುತ್ತಿದ್ದದ್ದು ಎಂದು ಕಂಡು ಬಂದಿತು. ಅನುಮಾನಗೊಂಡು ನಾವು ಸದರಿ ಮನೆಯ ಹತ್ತಿರ ಹೋಗಿ ಅಲ್ಲಿಯೇ ಇದ್ದ ಸಾರ್ವಜನಿಕರಿಗೆ ಸಾಲಾಬಾಯಿ ಲಮಾಣಿ ಎಂಬಾತಳ ಮನೆಯ ಬಗ್ಗೆ ವಿಚಾರಿಸಲಾಗಿ ಹಾಗೂ ನಮಗೆ ಬಂದ ಬಾತ್ಮಿ ವಿಷಯ ತಿಳಿಸಿ, ನಂತರ ಅಲ್ಲಿ ನೆರದ ಸಾರ್ವಜನಿಕರಲ್ಲಿ ಮನೆಯನ್ನು ಶೋಧಿಸುವ ಕಾರ್ಯವಿದ್ದು, ಪಂಚರಾಗಿ ಸಹಕರಿಸಲು ಕೋರಿಕೊಳ್ಳಲಾಗಿ, ಸ್ಥಳೀಯರಾದ ಚಾಸಾ-2 ಮತ್ತು ಚಾಸಾ-3 ರವರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿದ್ದು, ಆಗ ಸಮಯ 9-00 ಗಂಟೆ ಆಗಿತ್ತು. ಮನೆಯು 4 ಕೋಣೆಯದಾಗಿದ್ದು, ಸದರಿ ಮನೆಯ ಅಡುಗೆ ಕೋಣೆಯ ಬಲ ಬದಿಯ ಮೂಲೆಯಲ್ಲಿ ಬಿಳಿ ಬಣ್ಣದ ಗೊಬ್ಬರದ ಚೀಲ ಇದ್ದದ್ದು ಕಂಡು ಬಂದಿತು. ಸದರಿ ಚೀಲವನ್ನು ಬಿಚ್ಚಿ

ನೋಡಲಾಗಿ ಅದರಲ್ಲಿ 1 ಲೀಟರ ಸಾಮರ್ಥ್ಯದ 2 ದ್ರವ ತುಂಬಿದ ಬಿಸ್ಲೇರಿ ಬಾಟಲ ಇರುವುದು ನಮಗೆ ಕಂಡು ಬಂದಿತು. ಸದರಿ ಬಾಟಲಗಳನ್ನು ಪರಿಶೀಲಿಸಲಾಗಿ ಅದು ಹುಳುಚಾದ ಗಡಸು ವಾಸನೆ ಉಳ್ಳ ಕಳ್ಳಭಟ್ಟಿ ಸಾರಾಯಿ ಇರುವುದು ಕಂಡು ಬಂದಿತು. ಆಗ ಸಮಯ ಬೆಳಿಗ್ಗೆ 9-30 ಗಂಟೆ ಆಗಿತ್ತು. ಸದರಿ ಮನೆಯ ಕುರಿತು ಪಂಚರಾದ ಸ್ಥಳೀಯರಿಗೆ ಅಧಿಕಾರಿಗಳು ಕೇಳಲಾಗಿ, ಸದರಿ ಮನೆಯು ಸಾಲಾಬಾಯಿ ಲಮಾಣಿಗೆ ಸೇರಿದ್ದು, ಆಕೆಯ ಕುಟುಂಬವು ಆಕೆಯೊಂದಿಗೆ ಸದರಿ ಮನೆಯಲ್ಲಿ ವಾಸಿಸುತ್ತಿದ್ದಾಗಿ ತಿಳಿಸಿದರು. ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಕಳ್ಳಭಟ್ಟಿ ಸಾರಾಯಿಯನ್ನು ವಶಪಡಿಸಿಕೊಂಡು ಜಪ್ತಾದ ಮುದ್ದೆ ಮಾಲನ್ನು ರಾಸಾಯನಿಕ ವಿಶ್ಲೇಷಣೆಗಾಗಿ ತೆಗೆದುಕೂಂಡು ಅದರ ಮುಚ್ಚಳಕ್ಕೆ ಬಿಳಿ ಬಣ್ಣದ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅದರ ಮೇಲೆ ಅರಗಿನ ಸಹಾಯದಿಂದ ಸರ್ಕಾರಿ ಸೀಲನ್ನು ಹಾಕಿದೆವು. ಪಂಚರು ಹಾಗೂ ಚಾಸಾ-1 ಸಹಿ ಮಾಡಿದ ಬಿಳಿ ಚೀಟಿಯನ್ನು ಮಾದರಿಗಾಗಿ ತೆಗೆದ ಬಾಟಲ ಮೇಲೆ ಅಂಟಿಸಿದೆವು. ಪಂಚನಾಮೆಯನ್ನು ಸ್ಥಳದಲ್ಲಿ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಬರೆದು ಸ್ಥಳದಲ್ಲಿಯೆ ಪಂಚರ ಸಹಿಯನ್ನು ಪಡೆಯಲಾಯಿತು. ನಂತರ ಜಪ್ತು ಪಡಿಸಿದ ಮು.ಮಾಲಿನೊಂದಿಗೆ ಮತ್ತು ಪಂಚನಾಮೆಯೊಂದಿಗೆ ಕಚೇರಿಗೆ ತರಲು ಚಾಸಾ-1 ರವರಿಗೆ ಅಗತ್ಯವಿದ್ದ ಸಹಾಯ ಮಾಡಿರುತ್ತೇನೆ. 1 ನೇ ಆರೋಪಿತಳನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿತಳು ಕಚೇರಿಗೆ ಬಂದಾಗ ಆಕೆಯನ್ನು ಗುರುತಿಸಿ ಮರುಹೇಳಿಕೆ ನೀಡಿರುತ್ತೇನೆ. ಮುಮಾ-1 ಮತ್ತು 2 ನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**ಪಾಟೀ ಸವಾಲು : ಶ್ರೀಮತಿ.ಎಮ್.ಎಸ್.ಎನ್ ವಕೀಲರಿಂದ ಶ್ರೀ.ಟಿ.ಆರ್.ಎಚ್ ವಕೀಲರ ಪರವಾಗಿ ಆರೋಪಿಯವರ ಪರವಾಗಿ**

1. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಘಟನೆ ಆಯಿತು ಎಂದು ಹೇಳುವ ಸ್ಥಳಕ್ಕೆ ಯಾವತ್ತು ಹೋಗಿಲ್ಲ, ಯಾವುದೇ ಕಳ್ಳಭಟ್ಟಿ ಸಾರಾಯಿಯನ್ನು ವಶಪಡಿಸಿಕೊಂಡಿಲ್ಲ, ಆರೋಪಿತಳು ನಿಮ್ಮನ್ನು ನೋಡಿ ಓಡಿ ಹೋಗಿಲ್ಲ, ಯಾವುದೇ ಪಂಚನಾಮೆಯನ್ನು ತಯಾರಿಸಿಲ್ಲ, ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಮುಮಾ-1 ಕ್ಕೂ ಹಾಗೂ ಆರೋಪಿತಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನೀವು ಅಂಕಿ-ಸಂಖ್ಯೆಗಳಿಗೋಸ್ಕರ ಸುಳ್ಳು ದೂರು ಸಲ್ಲಿಸಿ ಆದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ